ಯೋಚಿಸುತ್ತಾ ಅರಮನೆಯ ಸುತ್ತಲಿನ ಉದ್ಯಾನವನ್ನು ಅನ್ಯಮನಸ್ಕನಾಗಿ ನೋಡುತ್ತಾ ನಡೆಯುತ್ತಿದ್ದವನಿಗೆ ಅರಮನೆಯ ಮಾಲಿಯು ಗಿಡಗಳಿಗೆ ನೀರುಣಿಸುವುದು ಕಂಡಿತು. ತಕ್ಷಣ ಒಂದು ಉಪಾಯ ಹೊಳೆಯಿತು. ಕೂಡಲೇ ಮಾಲಿಯನ್ನು ಕರೆದು ಅರಮನೆಯ ಉದ್ಯಾನಕ್ಕೆ ಇಂದಿನಿಂದ ನೀರು ನಿಡಿ ಕೊಡಬಾರದೆಂದು ತಾಕೀತು ಮಾಡಿದನು. ಭಯಗೊಂಡ ಮಾಲಿಯು 'ಬುದ್ಧೀ, ನಾನು ನೀರು ನಿಡಿ ನೋಡದಿದ್ದರೆ ಉದ್ಯಾನವನ ಒಣಗಿ ಹೋಗುತ್ತದೆ. ನಾನು ಜಹಪನಾರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಕಾಪಾಡಿ' ಎಂದನು. ಆಗ ಬೀರಬಲ್ಲನು 'ಜಹಪನಾ ನಿನ್ನನ್ನು ಕರೆಸಿ ಕೇಳಿದಾಗ ಇದು ಮಂತ್ರಿ ಬೀರಬಲ್ಲನ ಆಜ್ಞೆ ಎಂದು ಹೇಳು' ಎಂದನು. ಮಾಲಿಯು ಅಂದಿನಿಂದ ಬೀರಬಲ್ಲನ ಆದೇಶದಂತೆ ಉದ್ಯಾನವನಕ್ಕೆ ನೀರು ಕೊಡುವುದು ಬಿಟ್ಟನು. ಎರಡೇ ದಿನದಲ್ಲಿ ನಳನಳಿಸುವ ಉದ್ಯಾನ ಬರಗೆಟ್ಟಂತೆ ಒಣಗಿ ಹೋಯಿತು. ಎಂದಿನಂತೆ ರಾಣೀವಾಸಕ್ಕೆ ಬಂದ ಜಹಪನಾ ಅಕ್ಬರನು ಒಣಗಿ ನಿಂತ ತನ್ನ ಪ್ರೀತಿಯ ಹೂ ಗಿಡಗಳನ್ನು ನೋಡಿ ಕೆಂಡಾಮಂಡಲನಾದನು. 'ಯಾರಲ್ಲಿ! ಮಾಲಿಯನ್ನು ಕರೆಯಿರಿ' ಎಂದು ಗುಡುಗಿದನು. ಗಡಗಡನೆ ನಡುಗುತ್ತಾ ಬಂದ ಮಾಲಿ ಬೀರಬಲ್ಲನು ಮೊದಲೇ ಹೇಳಿದಂತೆ 'ಜಹಪನಾ, ಉದ್ಯಾನವನಕ್ಕೆ ನೀರು ನಿಡಿ ನೋಡಬಾರದು ಎಂದು ಮಹಾಮಂತ್ರಿ ಬೀರಬಲ್ಲರು ಆದೇಶಿಸಿದ್ದಾರೆ' ಎಂದನು. ಜಹಪನಾರ ಸಿಟ್ಟು ನೆತ್ತಿಗೇರಿತು. ಬೀರಬಲ್ಲನನ್ನು ಕೂಡಲೇ ಕರೆಸಿಕೊಂಡನು. ನಸುನಗುತ್ತಾ ಬಂದು ವಂದಿಸಿ ನಿಂತ ಬೀರಬಲ್ಲನನ್ನು 'ಬೀರ್ಬಲ್! ಇದೇನಿದು ಉದ್ಧಟತನ? ಅರಮನೆಗೆ ಉದ್ಯಾನವನಕ್ಕೆ ನೀರು ನಿಡಿ ನೋಡಿಕೊಳ್ಳದಂತೆ ಮಾಡಿರುವ ಕಾರಣವೇನು?' ಎಂದು ಅಬ್ಬರಿಸಿದನು. ಬೀರಬಲ್ಲನು ಸ್ವಲ್ಪವೂ ಭಯಪಡದೆ ಜಹಪನಾ ನಾನು ಎಷ್ಟೆಂದರೂ ನಿಮ್ಮ ಆಜ್ಞೆಯ ಪರಿಪಾಲಕ. ಅಂದು ಅರಣ್ಯವಾಸಿಗಳ ಸೌಂದರ್ಯಕ್ಕೆ ಮನಸೋತು ನೀವು ರಾಣೀವಾಸಕ್ಕೆ ಊಟ ಉಪಚಾರದ ಬದಲಾವಣೆ ತಂದಿರಿ. ಅದೇ ಬದಲಾವಣೆಯನ್ನು ನಾನು ಮುಂದುವರೆಸಿ ಅರಣ್ಯ ಹೇಗೆ ಕೇವಲ ಮಳೆಯನ್ನವಲಂಬಿಸಿ ನಳನಳಿಸುವುದೋ ಅಂತೆಯೇ ನಮ್ಮ ಉದ್ಯಾನವನವೂ ಕಾಡಿನಂತೆ ಕಂಗೊಳಿಸಲೆಂದು ನೀರು ನಿಡಿ ನಿಲ್ಲಿಸಲು ಹೇಳಿದೆ ಎಂದು ಹೇಳಿದನು. ತಕ್ಷಣ ಜಹಪನಾಗೆ ತನ್ನ ತಪ್ಪಿನ ಅರಿವಾಯಿತು. ಕಾಡು ಸಕಲ ಜೀವರಾಶಿಯನ್ನು ಪೋಷಿಸುವ ಮಹಾಶಕ್ತಿ ಎಂದೂ, ಅದರ ಪೋಷಣೆ ಚೈತನ್ಯ ಶಕ್ತಿಯನ್ನು ನಾವು ಎಂದಿಗೂ ಹೋಲಿಸಲು ಸಾಧ್ಯವಿಲ್ಲ ಎಂದರಿತನು. ತನ್ನ ಕಣ್ತೆರೆಸಿದ ಬೀರಬಲ್ಲನನ್ನು ಪ್ರೀತಿಯಿಂದ ಆಲಂಗಿಸಿ ರಾಣೀವಾಸದ ಬಗೆಗಿನ ತನ್ನ ಆದೇಶವನ್ನು ರದ್ದುಗೊಳಿಸಿದನು. ಬೇಗಮ್‌ಳ ಮುಖದಲ್ಲಿ ಹೂ ಅರಳಿತು.

# ಮುನ್ನಿ

ಪುಟ್ಟಿ ಮನೆಯೊಳಗೊಂದು
ಪುಟ್ಟ ಬೆಕ್ಕು ಕಂಡಳು
ಮುನ್ನಿ ಎಂದು ಹೆಸರನಿಟ್ಟು
ನಕ್ಕು ನಲಿಯುತ್ತಿದ್ದಳು

ಮುದ್ದಿನಿಂದ ಬಟ್ಟಲಲ್ಲಿ
ಸಕ್ಕರೆ ಹಾಲು ಕೊಟ್ಟಳು
ಪ್ರೀತಿಯಿಂದ ಅಪ್ಪಿಕೊಂಡು
ಹಣೆಗೆ ಮುತ್ತ ಇಟ್ಟಳು

ಚಳಿಯು ಆಗಬಾರದೆಂದು
ಅಂಗಿ ಚಡ್ಡಿ ತಂದಳು
ಸೊಳ್ಳೆ ಕಡಿಯಬಾರದೆಂದು
ಪರದೆ ಕಟ್ಟಿಬಿಟ್ಟಳು

ಯಾವ ಭಯ ಬೇಡವೆಂದು
ಅದರ ಜೊತೆ ಇದ್ದಳು
ಹಾಡು ಹಾಡಿ ಕತೆಯ ಹೇಳಿ
ಮುನ್ನಿ ಮನವ ಗೆದ್ದಳು

ಪಾನಿಪುರಿ ಗೋಬಿ ಐಸು
ತಿನಿಸಿ ತಾನು ತಿಂದಳು
ಉಣ್ಣೆ ಮೈ ಮೋಟು ಬಾಲ
ಗೋಲಿಯಂಥ ಕಂಗಳು

ಮುನ್ನಿ ದನಿ ಜೇನಹನಿ
ಕೇಳಲು ಕಿವಿಗೆ ಆಹಾ
ಪುಟ್ಟಿಯ ಹಾಗೆ ಮುನ್ನಿಗೂ
ಬೇಕು ಬಿಸ್ಕತ್ತು ಚಹಾ

**ಸುರೇಶ ಕಂಬಳಿ**

ಕಲೆ: ಸಂತೋಷ್ ಸಸಿಹಿತ್ಲು



## ಕುಂಚ ಪ್ರಪಂಚ



**ನೇಹಾ ಎಸ್**
5ನೇ ತರಗತಿ, ಕುವೆಂಪು ಮಾದರಿ ಹಿರಿಯ ಪ್ರಾಥಮಿಕ ಶಾಲೆ, ತೆಕ್ಕಟ್ಟೆ



ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ಬಣ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in